International Journal of Kannada Research 2022; 8(3): 08-14

International Journal of Kannada Research
www.kannadajournal.com

ISSN: 2454-5813
IJKR 2022; 8(3): 08-14
© 2022 IJKR
www.kannadajournal.com
Received: 14-05-2022
Accepted: 17-06-2022

**ಡಾ. ರಾಮರೆಡ್ಡಿ ಎಸ್. ರಡ್ಡೇರ**
ಸಹಪ್ರಾಧ್ಯಾಪಕರು & ಮುಖ್ಯಸ್ಥರು
ಕನ್ನಡ ವಿಭಾಗ, ಆರ್.ಟಿ.ಇ.ಎಸ್
ಪದವಿ ಕಾಲೇಜು, ರಾಣೇಬೆನ್ನೂರು,
ಹಾವೇರಿ-ಜಿಲ್ಲೆ, ಕರ್ನಾಟಕ, ಭಾರತ

**Corresponding Author:**
**ಡಾ. ರಾಮರೆಡ್ಡಿ ಎಸ್. ರಡ್ಡೇರ**
ಸಹಪ್ರಾಧ್ಯಾಪಕರು & ಮುಖ್ಯಸ್ಥರು
ಕನ್ನಡ ವಿಭಾಗ, ಆರ್.ಟಿ.ಇ.ಎಸ್
ಪದವಿ ಕಾಲೇಜು, ರಾಣೇಬೆನ್ನೂರು,
ಹಾವೇರಿ-ಜಿಲ್ಲೆ, ಕರ್ನಾಟಕ, ಭಾರತ

# ರೈತ ಹೋರಾಟಗಾರ- ಸಂಸ್ಕೃತಿ ಚಿಂತಕ ಶ್ರೀಭಾಸ್ಕರರಾವ ಮುಡಬೂಳ: ಜೀವನ ಮತ್ತು ಸಾಧನೆ

**ಡಾ. ರಾಮರೆಡ್ಡಿ ಎಸ್. ರಡ್ಡೇರ**

ಶ್ರೀ ಭಾಸ್ಕರರಾವ ಕಲ್ಯಾಣರಾವ ಕುಲಕರ್ಣಿಯವರು ಗ್ರಾಮನಾಮದ ಮೂಲಕ 'ಶ್ರೀ ಭಾಸ್ಕರರಾವ ಮುಡಬೂಳ' ಎಂದೇ ತಮ್ಮನ್ನು ಸಾಂಸ್ಕೃತಿಕವಾಗಿ ಗುರುತಿಸಿಕೊಂಡಿದ್ದಾರೆ. ಇವರ ಹುಟ್ಟೂರು ಇಂದಿನ ಮುಡಬೂಳ (ಯಾದಗಿರಿ ಜಿಲ್ಲೆ, ಶಹಾಪುರ ತಾಲ್ಲೂಕು) ಗ್ರಾಮ. ಕೃಷಿ ಪ್ರಧಾನವಾದ ವೈದಿಕ ಮನೆತನದ ಕಲ್ಯಾಣರಾವ-ರಂಗಮ್ಮ ದಂಪತಿಗಳಿಗೆ ಹದಿಮೂರು ಜನ ಮಕ್ಕಳಲ್ಲಿ ನಾಲ್ಕನೆಯವರಾಗಿ ದಿನಾಂಕ: 05-10-1943ರಲ್ಲಿ ಶ್ರೀ ಭಾಸ್ಕರರಾವ ಅವರು ಜನಿಸಿದರು. ಇವರು ತಮ್ಮ ಪ್ರಾಥಮಿಕ-ಪ್ರೌಢ ಶಿಕ್ಷಣವನ್ನು ಮುಡಬೂಳ, ಶಹಾಪುರ ಮತ್ತು ಕಲಬುರ್ಗಿಯಲ್ಲಿ ಪೂರೈಸಿಕೊಂಡು ಪದವಿ ವ್ಯಾಸಾಂಗವನ್ನು ಹೈದರಾಬಾದನಲ್ಲಿ ಮುಗಿಸಿಕೊಂಡು, 1968ರಲ್ಲಿ ಬೆಂಗಳೂರಿನಲ್ಲಿ ಕಾನೂನು ಪದವಿಯನ್ನು ಪಡೆದುಕೊಂಡಿದ್ದಾರೆ. ಅದೇ ವರ್ಷ 1968ರಲ್ಲಿ ಬೆಂಗಳೂರಿನ ಉಚ್ಚನ್ಯಾಯಾಲಯದಲ್ಲಿ ವಕೀಲವೃತ್ತಿಯನ್ನು ಆರಂಭಿಸುತ್ತಾರೆ. ಆದರೆ ಕಾರಣಾಂತರಗಳಿಂದ ಮರಳಿ ಮುಡಬೂಳಕ್ಕೆ ಬರಬೇಕಾಗುತ್ತದೆ. ಒಂದೆರಡು ವರ್ಷ ಕೃಷಿ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವಾಗ ಅವರ ತಂದೆಯ ಅಪೇಕ್ಷೆ ಮತ್ತು ಒತ್ತಾಸೆಯ ಮೇರೆಗೆ 1970ರಲ್ಲಿ ಸುರಪುರದಲ್ಲಿ ನ್ಯಾಯವಾದಿಗಳಾಗಿ ವೃತ್ತಿಯನ್ನು ಮುಂದುವರೆಸುತ್ತಾರೆ. 1980ರ ಅವಧಿಯಲ್ಲಿ ಶಹಾಪುರದಲ್ಲಿ ನ್ಯಾಯಾಲಯ ಆರಂಭವಾದ ಮೇಲೆ ತಮ್ಮ ವಕೀಲ ವೃತ್ತಿಯನ್ನು ಶಹಾಪುರಕ್ಕೆ ಸ್ಥಳಾಂತರಿಸಿಕೊಳ್ಳುತ್ತಾರೆ. ಅಪಾರವಾದ ಕಾನೂನು ಜ್ಞಾನ, ಅಭಿವ್ಯಕ್ತಿಯ ಕೌಶಲ್ಯ, ವೃತ್ತಿನಿಪುಣತೆ, ಚಾಣಾಕ್ಷಮತಿತ್ವ, ಜನಾನುರಾಗ ಮತ್ತು ವೃತ್ತಿಗೌರವ ಬೆಳೆಸಿಕೊಂಡು ಬಂದಿರುವ ಕಾರಣಕ್ಕಾಗಿ ಸಗರನಾಡಿನ ನ್ಯಾಯವಾದಿಗಳಲ್ಲಿ ಪ್ರಸಿದ್ಧಿಯನ್ನು ಗಳಿಸಿದ್ದಾರೆ. ಇವರು ಬೆಳೆಸಿಕೊಂಡು ಬಂದಿರುವ ಆಹಾರ ಶಿಸ್ತು ಮತ್ತು ಆಲೋಚನೆಯ ಶಿಸ್ತುಗಳು ಗಮನಾರ್ಹವೆನಿಸುತ್ತದೆ. ಇವರು ಶುದ್ಧ ಸಸ್ಯಾಹಾರವನ್ನು ಉಪಯೋಗಿಸುತ್ತಾ ಆಚಾರ-ವಿಚಾರ ಶುದ್ಧಿಯಿಂದ ಬಾಳುತ್ತಾ ಬಂದಿದ್ದಾರೆ. ಇವರು ಪ್ರಾಣಾಯಾಮ ಮತ್ತು ಯೋಗಾಸನಗಳನ್ನು ನಿತ್ಯವು ಮಾಡುವ ರೂಢಿಯನ್ನು ಮೊದಲಿಂದಲೂ ಇಟ್ಟುಕೊಂಡು ಬಂದಿದ್ದಾರೆ. ಯಾವ ಸಂದರ್ಭದಲ್ಲಿಯೂ, ಎಂಥಹದ್ದೇ ಪರಿಸ್ಥಿಯಲ್ಲಿಯೂ ಮಾನಸಿಕ ಸ್ಥಿಮಿತತೆಯನ್ನು ಕಾಪಾಡಿಕೊಳ್ಳುವ ಮತ್ತು ಸ್ಥಿತಪ್ರಜ್ಞತೆಯಿಂದ ವರ್ತಿಸುವುದರೊಂದಿಗೆ ಸಂದರ್ಭ-ಪರಿಸ್ಥಿತಿಗಳಿಗೆ ತಕ್ಕಂತೆ ನ್ಯಾಯೋಚಿತವಾಗಿ ನಡೆದುಕೊಳ್ಳುವ ಆರೋಗ್ಯಕರವಾದ ಜೀವನ ಕಲೆಯನ್ನು ರೂಡಿಸಿಕೊಂಡಿದ್ದಾರೆ. ಇವರು ನಿರಂತರವಾಗಿ ಇತಿಹಾಸ, ಸಾಹಿತ್ಯಗಳನ್ನು ಅಭ್ಯಸಿಸುವ ಅಧ್ಯಯನಶೀಲತೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಹೀಗಾಗಿ ಇವರಲ್ಲಿ ಸಂಸ್ಕೃತಿ ಚಿಂತನೆಯ ಪ್ರಜ್ಞೆ ಮೂಡಿಬಂದಿದೆ. ಶ್ರೀಭಾಸ್ಕರರಾವ ಮುಡಬೂಳ ಅವರು ಅಪೂರ್ವವಾದ ಆರೋಗ್ಯಭಾಗ್ಯವನ್ನು ಹೊಂದಿದ್ದಾರೆ. ಇವರು ಪ್ರಸ್ತುತ ತಮ್ಮ 79ರ ಇಳಿವಯಸ್ಸಿನಲ್ಲಿಯೂ ನವಚೈತನ್ಯದ ಚಿಲುಮೆಯಂತೆ ಹಿರಿಯ ನ್ಯಾಯವಾದಿಗಳಾಗಿ ಅತ್ಯಂತ ಉತ್ಸಾಹ ಮತ್ತು ಶ್ರದ್ಧೆಯಿಂದ ವೃತ್ತಿಯಲ್ಲಿ ಮಗ್ನರಾಗಿರುವುದು ಅವರ ಕಾಯಕ ಶ್ರದ್ಧೆಯ ದ್ಯೋತಕ ಎನ್ನಬಹುದು. ಅವರ ಈ ವೃತ್ತಿಪ್ರೀತಿ ಮತ್ತು ಲವಲವಿಕೆಯ ಬದುಕು ಇಂದಿನ ಯುವಕರಿಗೆ ಆದರ್ಶ ಮಾದರಿಯು ಆಗಿದೆ.

ಇದರೊಂದಿಗೆ ಶ್ರೀ ಭಾಸ್ಕರರಾವ ಮುಡಬೂಳ ಅವರು ತಮ್ಮ ವೃತ್ತಿಯೊಂದಿಗೆ ಆರಂಭದಿಂದಲೂ ಮೈಗೂಡಿಸಿಕೊಂಡು ಬಂದಿರುವ ಸಮಾಜಮುಖಿ ವ್ಯಕ್ತಿತ್ವ ಮತ್ತು ಸಂಘಟನಾ ಚಾತುರ್ಯಗಳು ಅವರ ಘನತೆಯನ್ನು ಮತ್ತು ಜನಪ್ರೀಯತೆಯನ್ನು ಹೆಚ್ಚಿಸಿವೆ. ಇವರು 1970ರಲ್ಲಿ ಸುರಪುರದಲ್ಲಿ ವಕೀಲವೃತ್ತಿ ಆರಂಭಿಸಿದ ಆರಂಭಿಸಿದ ಕಾಲದಲ್ಲಿ 1972ರಲ್ಲಿ ಹಿಂದೆಂದೂ ಕಂಡರಿಯದ ಭೀಕರವಾದ ಬರಗಾಲ ಬಂದೊದಗುತ್ತದೆ. ಜನ-ಜಾನುವಾರುಗಳಿಗೆ ಆಹಾರ-ನೀರಿನ ಸಮಸ್ಯೆ ವ್ಯಾಪಕವಾಗಿ ತಲೆದೋರಿ ಎಲ್ಲೆಡೆ

ಆಹಾಕಾರ ಉಂಟಾಗುತ್ತದೆ. ಅಂತಹ ಪರಸ್ಥಿತಿಯಲ್ಲಿ ಸಾಧ್ಯವಾದ ಜನೋಪಕಾರ ಗೈಯ್ಯುವ ಉದ್ದೇಶದಿಂದ ಸ್ವಗ್ರಾಮ ಮುಡಬೂಳ ಬರುತ್ತಾರೆ.

ಎಪ್ಪತ್ತರ ದಶಕದ ಅವಧಿಯಲ್ಲಿ ಮುಡಬೂಳ ಗ್ರಾಮಕ್ಕೆ ಮೊದಲಿನಿಂದಲೂ ಇದ್ದ ನೀರಿನ ಅಭಾವ ಬರಗಾಲದಿಂದ ಮತ್ತಷ್ಟು ಹೆಚ್ಚಾಗಿ ಕಾಡುತ್ತದೆ. ಇಡೀ ಊರಿನ ಜನಕ್ಕೆ 'ನಾಗರಬಾವಿ'ಯೊಂದೇ ಕುಡಿಯುವ ನೀರಿನ ಆಧಾರವಾಗಿತ್ತು. ಬೇಸಿಗೆಯ ಸಂದರ್ಭಗಳಲ್ಲಿ ಆ ಬಾವಿಯ ನೀರು ಕೂಡ ಬತ್ತಿ ತಳಮಟ್ಟಕ್ಕೆ ಹೋಗುತ್ತಿತ್ತು. ಜನರು ಗಿಂಡಿಯಿಂದ ಕೊಡ ತುಂಬಿಕೊಳ್ಳಲು ಸರದಿ ಸಾಲಿನಲ್ಲಿ ನಿಲ್ಲಬೇಕಾದ ಪರಸ್ಥಿತಿಯಿತ್ತು. ಮಳೆ ಚೆನ್ನಾಗಿ ಆದಾಗ ಜಾನುವಾರುಗಳಿಗೆ, ಬಟ್ಟೆ ತೊಳೆಯಲು ಮತ್ತು ಇತರ ಉಪಯೋಗಕ್ಕೆ ಕೆರೆಯ ನೀರನ್ನು ಜನ ಬಳಸುತ್ತಿದ್ದರು. ಬರಗಾಲದಲ್ಲಂತೂ ನೀರಿಗಾಗಿ ನಡೆಯುವ ಜನರ ಪರದಾಟ ಹೇಳತೀರದಾಗಿ ಪರಿಣಮಿಸುತ್ತದೆ. ಕೆಲವರು ಬಂಡಿ ಕಟ್ಟಿಕೊಂಡು ಬೇರೆ ಊರಿಗೆ ಹೋಗಿ ಬ್ಯಾರಲ್‌ಗಳಲ್ಲಿ ನೀರನ್ನು ತಂದ ಉದಾಹರಣೆಗಳೂ ಇವೆ. ಬರಗಾಲದಲ್ಲಿ ಸರಕಾರದವರು ಆಗ ಟ್ಯಾಂಕರ್‌ಗಳಿಂದ ನೀರು ಸರಬರಾಜು ಮಾಡಿದರೂ ಅದು ಸಾಕಾಗುತ್ತಿರಲಿಲ್ಲ. ಕುಡಿಯುವ ನೀರಿಗಾಗಿಯೇ ಆಗ ಊರವರಲ್ಲಿ ಜಗಳ–ಕದನಗಳಾಗಿದ್ದೂ ಉಂಟು. ಇನ್ನು ದನಕರುಗಳಿಗೆ ನೀರು ಒದಗಿಸುವುದು ಬಹುದೊಡ್ಡ ಸಮಸ್ಯೆಯಾಗಿ ಗೋಚರಿಸಿತ್ತು. ದೇವರು ಊರಿಗೆ ಫಲವತ್ತಾದ ಭೂಮಿ ನೀಡಿದ್ದಾನೆ. ಸುಕಾಲದಲ್ಲಿ ಇಲ್ಲಿನ ರೈತರು ಸಾಕಷ್ಟು ದವಸ–ಧಾನ್ಯಗಳನ್ನು ಬೆಳೆದರೂ, ನೀರಿಗಾಗಿ ಪರದಾಡುವ ಪರಿಸ್ಥಿತಿ ಮಾತ್ರ ತಪ್ಪುತ್ತಿರಲಿಲ್ಲ. ಬಾಲ್ಯದಿಂದಲೂ ಅದೇ ಊರಿನಲ್ಲಿ ಹುಟ್ಟಿ ಬೆಳೆದ ಶ್ರೀ ಭಾಸ್ಕರರಾವ ಮುಡಬೂಳ ಅವರು ಆ ಗ್ರಾಮದ ಅಂದಿನ ದಾರುಣ ಪರಿಸ್ಥಿತಿಯನ್ನು ನೆನೆದು, ಅದನ್ನು ತಮ್ಮದೇ ಆದ ದಾಟಿಯಲ್ಲಿ ಲೇಖಕರ ಮಾತುಗಳಲ್ಲಿ "ದೇವರು ಗ್ರಾಮಕ್ಕೆ ಬಂಡಿಯಿಂದ ಅನ್ನ ಕೊಟ್ಟರೆ, ಗಿಂಡಿಯಿಂದ ನೀರು ಕೊಟ್ಟಿದ್ದಾನೆ"[1] ಎಂದು ಹೇಳುತ್ತಾರೆ.

1972ರ ಬರಗಾಲದ ಆ ಸನ್ನಿವೇಶದಲ್ಲಿ ಶ್ರೀಯುತ ಭಾಸ್ಕರರಾವ ಅವರು ವಕೀಲವೃತ್ತಿಯನ್ನು ಬದಿಗಿಟ್ಟು ಸ್ವಗ್ರಾಮದ ಜನರಿಗೆ ತಮ್ಮಿಂದಾಗುವ ಜನಹಿತ ಕಾರ್ಯಗಳನ್ನು ಗೈಯ್ಯಬೇಕೆಂಬ ಸದ್ಭಾವನೆಯಿಂದ ಊರಿಗೆ ಬರುತ್ತಾರೆ. ಆಗ ಸರಕಾರವು ಹಮ್ಮಿಕೊಂಡಿದ್ದ ಬರಗಾಲ ಕಾಮಗಾರಿಗಳು ಮತ್ತು 'ಕೂಲಿಗಾಗಿ ಕಾಳು' ಯೋಜನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಜನಪರವಾಗಿ ಶ್ರಮಿಸುತ್ತಾರೆ. ಜನರಿಗೆ ಕೆಲಸ ಮತ್ತು ಆಹಾರ ಸಾಮಾಗ್ರಿ ಒದಗಿಸಲು ಕೈಲಾದ ಸಹಾಯವನ್ನು ಮಾಡುತ್ತಾರೆ. ಬರಗಾಲ ಕಳೆದ ಮೇಲೆ ಆಹಾರ ಸಮಸ್ಯೆಯೇನೋ ಪರಿಹಾರವಾಗುತ್ತದೆ; ಆದರೆ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರವೇನೆಂಬ ಚಿಂತೆಯಲ್ಲಿ ತೊಡಗುತ್ತಾರೆ. ಹೀಗಿರುವಾಗಲೇ ಅವರ ಆಲೋಚನೆಗೆ ಹೊಳೆದದ್ದು 'ಕೃಷ್ಣಾ ವಿವಿಧೋದ್ದೇಶ ನೀರಾವರಿ ಯೋಜನೆ'ಯ ದೂರದ ಬರವಸೆ ಮತ್ತು ಅದು ಬೇಗ ನೆರವೇರಬೇಕೆಂಬ ಹಂಬಲನ್ನು ಹೊಂದುತ್ತಾರೆ. ಆ ವೇಳೆಗಾಗಲೇ 1964ರಲ್ಲಿ ಕೃಷ್ಣಾ ಯೋಜನೆಗೆ ಕೇಂದ್ರ ಸರಕಾರದ ಅಂದಿನ ಮಂತ್ರಿಗಳಾಗಿದ್ದ ಶ್ರೀ ಲಾಲಬಹದ್ದೂರ ಶಾಸ್ತ್ರಿಯವರು ಶಂಕುಸ್ಥಾಪನೆ ನೆರವೇರಿಸಿದ್ದು ಗಮನಕ್ಕೆ ಬರುತ್ತದೆ. ಯೋಜನೆಯ ನೀರಾವರಿ ವ್ಯಾಪ್ತಿಯಲ್ಲಿ ಮುಡಬೂಳ ಗ್ರಾಮ ಕೂಡ ಸೇರಿದ್ದನ್ನು ಗಮನಿಸಿ, ಅದು ಜಾರಿಯಾದಾಗ ಊರ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಲಭಿಸುತ್ತದೆ–ಎಂದು ಕಲ್ಪಿಸಿಕೊಳ್ಳುತ್ತಲೇ ಭಾವಪರವಶಗೊಳ್ಳುತ್ತಾರೆ. ಹೀಗೆ ಶ್ರೀಯುತ ಭಾಸ್ಕರರಾವ ಅವರು ಊರ ನೀರಿನ ಸಮಸ್ಯೆಯ ಪರಿಹಾರವನ್ನು ಕುರಿತು ಯೋಚಿಸುತ್ತಲೇ ಕೃಷ್ಣಾ ಯೋಜನೆಯಿಂದ ಇದು ಬಗೆಹರಿಯಬಹುದೆಂದು ಅಂದು ಕಲ್ಪಿಸಿಕೊಂಡಿದ್ದು, 1990ರ ದಶಕದಿಂದ ಅಕ್ಷರಶಃ ನಿಜವಾಗುತ್ತದೆ. ಇಂಥ ಕಲ್ಪನೆ ಮತ್ತು ಆಲೋಚನೆಗಳು ಅವರ ದೂರದೃಷ್ಟಿಯ ಸಂಕೇತವೆಂದು ಪರಿಭಾವಿಸಬಹುದು.

ಬರಗಾಲ ಕಳೆದ ಮೇಲೆ ಸುರಪುರದಲ್ಲಿ ವಕೀಲವೃತ್ತಿಯನ್ನು ಮತ್ತೆ ಮುಂದುವರೆಸುತ್ತಾರೆ. ಆಗ ಕೃಷ್ಣಾ ಯೋಜನೆಯ ತೀವ್ರ ಜಾರಿಗಾಗಿ ಅಂದಿನ ಪ್ರಭಾವಿ ನಾಯಕರಾದ ಶ್ರೀ ಕೋಳೂರು ಮಲ್ಲಪ್ಪ, ಧರ್ಮರಾವ ಅಪಜಲಪುರಕರ, ಶಿವಣ್ಣ ಸಾವೂರ, ನ್ಯಾಯವಾದಿ ಅಬ್ಬಾಸ ಅಲಿ– ಈ ಮುಂತಾದ ಬುದ್ಧಿಜೀವಿಗಳು, ಹಿರಿಯರು ಆರಂಭಿಸಿದ ಹೋರಾಟಗಳಲ್ಲಿ ಇವರೂ ಕೂಡ ಸಕ್ರೀಯವಾಗಿ ಭಾಗವಹಿಸುತ್ತಾರೆ.[2] ಮುಂದೆ ಈ ಯೋಜನೆ ಜಾರಿಯಾದ ಮೇಲೆ ಕಾಮಗಾರಿಗಳು ಕಾರಣಾಂತರಗಳಿಂದ ಸ್ಥಗಿತಗೊಂಡಾಗ, ಇಲ್ಲವೇ ವಿಳಂಬವಾದಾಗ ತ್ವರಿತವಾಗಿ ಕಾಮಗಾರಿ ಮುಗಿಸುವಂತೆ ಸರಕಾರಕ್ಕೆ, ಮಂತ್ರಿಮಹೋದಯರಿಗೆ ಸ್ವಇಚ್ಛೆಯಿಂದ ಪತ್ರ ಬರೆಯುತ್ತಾರೆ;




ಭೀಮರಾಯನಗುಡಿ ಜನವರಿ 1984ರಲ್ಲಿ ಕೃಷ್ಣಾ ಮೇಲ್ದಂಡೆಯೋಜನೆಯ ವಿಳಂಬದ ಬಗ್ಗೆ ರೈತರ ಬೃಹತ್ ರ್‍ಯಾಲಿಯ ನಂತರ ಕೃಷ್ಣಾ ಕಾಡಾ ಆಡಳಿತಾಧಿಕಾರಿ ಹಿರಿಯ ಐ.ಎ.ಎಸ್. ಅಧಿಕಾರಿ ಹಜಾರಾ ಹಾಗೂ ಚೀಫ್ ಇಂಜಿನಿಯರ್ ಎಮ್.ಎ. ಸಲಾಮ್‌ರವರಿಗೆ ರೈತ ಮುಖಂಡ ತೀರ್ಥಹಳ್ಳಿಯ ಪುರುಷೋತ್ತಮರಾವ್ ಹಾಗೂ ಇನ್ನಿತರ ರೈತ ಮುಖಂಡರು ಮನವಿ ಸಲ್ಲಿಸಿ ಚರ್ಚಿಸುತ್ತಿರುವುದು.

ದಿನಾಂಕ: 14–07–1984ರಂದು ಅಂದಿನ ವಿಧಾನಸಭೆಯ ಶಹಾಪುರ ಕ್ಷೇತ್ರದ ಶಾಸಕರಾಗಿದ್ದ ದಿ. ಶ್ರೀ ಬಾಪೂಗೌಡ ದರ್ಶನಾಪುರ ಅವರು ವಿಧಾನಸಭೆಯ ಮುಖ್ಯ ಸಚೇತಕರಾಗಿದ್ದಾಗ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾರ್ಯಗಳನ್ನು ತ್ವರಿತವಾಗಿ ಮುಗಿಸುವಂತೆ ಪತ್ರ ಬರೆದಾಗ, ಅದನ್ನು ಸ್ವಾಗತಿಸಿದ ಮಾನ್ಯರು ಇವರ ಸಲಹೆಗಳನ್ನು ಗೌರವದಿಂದ ಸ್ವಾಗತಿಸಿ, ಬೆಂಬಲದೊಂದಿಗೆ ಬರವಸೆಯ ಪತ್ರ ಬರೆದಿದ್ದಾರೆ.[3] ದಿನಾಂಕ: 09–01–1984ರಂದು ಅಂದಿನ ಭಾರತ ಸರ್ಕಾರದ ಕಾರ್ಮಿಕ ಮತ್ತು ಪುನರ್ವಸತಿ ಸಚಿವರಾಗಿದ್ದ ಶ್ರೀ ವೀರೇಂದ್ರ ಪಾಟೀಲ ಅವರಿಗೆ ಪತ್ರ ಬರೆದು ಕೃಷ್ಣ ಮೇಲ್ದಂಡೆ ಯೋಜನೆಯ ಕೆಲಸ–ಕಾರ್ಯಗಳ ಬಗೆಗೆ ಗಮನ ಹರಿಸುವಂತೆ ಪತ್ರ ಬರೆದಾಗ, "ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ನೀವು ತೆಗೆದುಕೊಂಡ ಆಸಕ್ತಿ ನನ್ನ ಮನಸ್ಸಿಗೆ ಸಮಾಧಾನ ಉಂಟುಮಾಡಿದೆ."[4] ಎಂಬ ಒಕ್ಕಣಿಕೆಯ ಪತ್ರವನ್ನು ಶ್ರೀ ವೀರೇಂದ್ರ ಪಾಟೀಲ ಅವರು ಬರೆದಿರುವುದು ಈ ದಿಸೆಯಲ್ಲಿ ದಾಖಲೆಯಾಗಿದೆ. ಅಂತೆಯೇ ದಿನಾಂಕ: 25–08–1987ರಂದು ಕರ್ನಾಟಕ ಗೃಹ ಮಂಡಳಿಯ ಅಧ್ಯಕ್ಷರಾಗಿದ್ದ ಶ್ರೀ ಬಾಪೂಗೌಡ ದರ್ಶನಾಪುರ ಅವರ ಪತ್ರ[5]–ಈ ಮುಂತಾದವುಗಳು ಕೃಷ್ಣಾಯೋಜನೆಯ ಜಾರಿಯ ಬಗೆಗೆ ಶ್ರೀ ಭಾಸ್ಕರರಾವ ಅವರ ನೇತೃತ್ವದಲ್ಲಿ ಕೈಕೊಂಡ ಹೋರಾಟಗಳ ಸಾಕ್ಷಿಪುರಾವೆಗಳಾಗಿವೆ. ರಾಷ್ಟ್ರೀಯ ಕಿಸಾನ ಸಂಘವನ್ನು ಕಟ್ಟಿ, ಸ್ವತಃ ಮುಂದಾಳತ್ವ ವಹಿಸಿ ಸರಕಾರದ ಗಮನ ಸೆಳೆಯುವಂಥ ಹೋರಾಟಗಳನ್ನು ಹಮ್ಮಿಕೊಳ್ಳುತ್ತಾರೆ. ಈ ಯೋಜನೆ ಮತ್ತು ಕಾಮಗಾರಿಗಳು ಸರಕಾರಗಳ ಜವಾಬ್ದಾರಿಯಾದರೂ ಅವುಗಳನ್ನು ನಿಗದಿತ ಕಾಲಾವಧಿಯಲ್ಲಿ ಮುಗಿಸುವಂತೆ ಎಚ್ಚರಿಸಬೇಕಾದ, ಒತ್ತಾಯಿಸುವ, ಮತ್ತು ಎಚ್ಚರಿಸುವ ಜವಾಬ್ದಾರಿ ಸಾರ್ವಜನಿಕರದು ಎಂಬುದನ್ನು ಈ ಮೂಲಕ ತೋರಿಸಿಕೊಟ್ಟಿದ್ದಾರೆ. ರೈತರ ಅನುಕೂಲಕ್ಕಾಗಿ ಕೈಗೊಂಡ ಈ ಯೋಜನೆಯ ಕಾರ್ಯಚಟುವಟಿಕೆಗಳನ್ನು ಕಾಲಕಾಲಕ್ಕೆ ಕೂಲಂಕುಷವಾಗಿ ಅವಲೋಕಿಸುವ ಜವಾಬ್ದಾರಿ ರೈತರು ಮತ್ತು ಅವರ ನೇತಾರರ ಕಾಳಜಿಯಾಗಿದೆ ಎಂಬ ಸತ್ಯವನ್ನು ಅರಿತ ಭಾಸ್ಕರರಾವ ಅವರು ಕೃಷ್ಣಾ ಯೋಜನೆಯ ಪ್ರತಿ ಹಂತದಲ್ಲೂ ಜವಾಬ್ದಾರಿಯುತ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾ ಬಂದು ಸರಕಾರ ಮತ್ತು ಅಧಿಕಾರಿ ವರ್ಗವನ್ನು ಎಚ್ಚರಿಸುವ ದಿಸೆಯಲ್ಲಿ ಗಮನ ಸೆಳೆದಿದ್ದಾರೆ.



ಭೀಮರಾಯನಗುಡಿ : ಡಿಸಂಬರ್ 1999, ಆಲಮಟ್ಟಿ ಅಣೆಕಟ್ಟೆಯ ಎತ್ತರದ ಬಗ್ಗೆ ಮಹಾರಾಷ್ಟ್ರ–ಆಂಧ್ರದ ಒತ್ತಾಯಕ್ಕೆ ರಾಜ್ಯ ಸರ್ಕಾರ ವಿರೋಧಿಸಬೇಕೆನ್ನುವ ರೈತರ ಒತ್ತಾಯ : ಕೃಷ್ಣಾಕಾಡಾದ ಉಪ ಆಡಳಿತಾಧಿಕಾರಿ ಶ್ರೀ ಅನೀಲರವರಿಗೆ, ರೈತ ಮುಖಂಡರಿಂದ ಮನವಿ. ರೈತ ಮುಖಂಡರಾದ ಬಿಜಾಪುರದ ಅಶೋಕ ಅಲ್ಲಾಪುರ–ಬೆಂಗಳೂರಿನ ಶ್ರೀಧರ–ಯಲ್ಲಯ್ಯನಾಯಕ ಹನುಮೇಶಕುಲಕರ್ಣಿ, ಭಾಸ್ಕರ್‌ರಾವ್ ಮುಡಬುಳ.

ಕೃಷ್ಣಾ ನೀರಾವರಿ ಯೋಜನೆಯಲ್ಲಿ ಕಳಪೆ ಕಾಮಗಾರಿ ನಡೆದಾಗ, ಭ್ರಷ್ಟಾಚಾರ ಗೋಚರಿಸಿದಾಗ ಅದನ್ನು ಎತ್ತಿ ತೋರಿಸಿ, ಪತ್ರಿಕೆಯಲ್ಲಿ ವರದಿ ಪ್ರಕಟಿಸಿ ಎಚ್ಚರಿಕೆಯನ್ನು ಮೂಡಿಸಿದ್ದಾರೆ. ಇದು ಅವರ ಹೋರಾಟದ ಮನೋಭಾವವನ್ನು ಸೂಚಿಸುತ್ತದೆ. 1995 ರಿಂದ 2002ರವರೆಗೆ ಕೃಷ್ಣಾ ಮೇಲ್ದಂಡೆಯೋಜನೆಯ ನೀರಾವರಿ ಸಲಹಾ ಸಮೀತಿಯ ಸದಸ್ಯರಾಗಿ ಕೂಡ ಇವರು ಇಲಾಖೆಗೆ ಮೌಲಿಕವಾದ ಸಲಹೆಗಳನ್ನು ನೀಡಿದ್ದಾರೆ. ನೀರಿನ ಬಳಕೆಯ ಕಾನೂನುಬದ್ದ ನಿಯಮಕ್ಕೆ ಧಕ್ಕೆಬಂದಾಗ ಸ್ವತಃ ನ್ಯಾಯಾಲಯದ ಮೊರೆಹೋಗುತ್ತಾರೆ. ಈ ಮೂಲಕ ನೀರಿನ ಬಳಕೆಯ ವ್ಯವಸ್ಥೆಯ ಬಗ್ಗೆ ಕಾನೂನಿನ ಅರಿವನ್ನು ಸಂಬಂಧಿಸಿದ ಯು.ಕೆ.ಪಿ. ಪ್ರದೇಶದ ಜನತೆಗೆ ಕಾನೂನಾತ್ಮಕವಾಗಿ ಬಿಂಬಿಸಿದ್ದಾರೆ.



1983ರಲ್ಲಿ ಶಹಾಪುರದ ತಹಸೀಲಕಾರ್ಯಲಯದಲ್ಲಿ ಕೃಷ್ಣಮೇಲ್ದಂಡೆ ಯೋಜನೆಯ ಕೆಲಸಗಳು ತೀವ್ರಗತಿಯಲ್ಲಿ ನಡೆಯುವ ಬಗ್ಗೆ ಕರೆದ ಸಭೆಯಲ್ಲಿ ಅಂದಿನ ಕರ್ನಾಟಕದ ಮಂತ್ರಿ ಬಿ.ಎಲ್.ಗೌಡ, ದಿ. ಬಾಪುಗೌಡದರ್ಶನಾಪುರ ಲೇಖಕ ಜಿ. ಎಸ್. ಪಾಟೀಲ, ವಕೀಲರು ಹಾಗೂ ಇನ್ನಿತರ ಪ್ರಮುಖರು.

ಹೀಗೆ 1972 ರಿಂದ 1991ರವರೆಗೆ ಸುಮಾರು ಇಪ್ಪತ್ತು ವರ್ಷಗಳ ಕಾಲ ನಿರಂತರವಾಗಿ ವಕೀಲ ವೃತ್ತಿಯೊಂದಿಗೆ ಕೃಷ್ಣಾ ಯೋಜನೆಯ ಜಾರಿಯ ಹೋರಾಟವನ್ನು ಒಂದು ಪ್ರವೃತ್ತಿಯನ್ನಾಗಿ ಬೆಳೆಸಿಕೊಂಡು ಬಂದಿದ್ದಾರೆ. ಈ ವಕೀಲರಿಗಿರುವ ರೈತಪರ ಕಾಳಜಿ, ಕೃಷಿ ಪ್ರೇಮ, ನಾಡಿನ ಶ್ರೇಯೋಭಿವೃದ್ಧಿಯ ಹಿತಚಿಂತನೆ ಸ್ಮರಣೀಯವೆನಿಸುತ್ತದೆ. 1991ರಲ್ಲಿ ಮುಡಬೂಳ ಉಪಕಾಲುವೆಯ ಮುಖಾಂತರ ಊರ ಸೀಮೆಗೆ ನೀರು ಹರಿದಾಗ ಜನರಿಗೆ ಉಂಟಾದ ಆನಂದದಲ್ಲಿ ತಮ್ಮ ಸಾರ್ಥಕ ಹೋರಾಟದ ಫಲಶ್ರುತಿಯನ್ನು ಅನುಭವಿಸುತ್ತಾರೆ. ಯಾವ ಊರಿನ ನೀರಿನ ಬವಣೆಗಾಗಿ 70ರ ದಶಕದಲ್ಲಿ ಚಿಂತಿಸಿದ್ದರೋ, ಆ ಊರಿಗೆ ಕೃಷ್ಣಾ ಯೋಜನೆಯ ನೀರು ಹರಿದು ಬರುತ್ತದೆಂದು ದೂರದ ಕಲ್ಪನೆ ತಳೆದಿದ್ದರೋ, ಅದೇ ನೀರಾವರಿ ಯೋಜನೆಯ ಜಾರಿಗಾಗಿ ಕಿಸಾನ ಸಂಘಟನೆಯ ನೇತಾರರಾಗಿ ಹಗಲಿರುಳು ಹೋರಾಡಿದ ಶ್ರಮವು ಸಾರ್ಥಕವೆನಿಸುತ್ತದೆ. ಇದರಿಂದ ಶ್ರೀಯುತ ಭಾಸ್ಕರರಾವ ಅವರಿಗೆ ಅತೀವ ಸಂತೋಷವೂ ಎನಿಸುತ್ತದೆ.

ಶ್ರೀಭಾಸ್ಕರರಾವ ಅವರು ತಮ್ಮ ಬದುಕಿನಲ್ಲಿ ಕೈಕೊಂಡ 'ನೀರಿನ ಹೋರಾಟ'ದ ಸಾರ್ಥಕ ಕ್ಷಣಗಳನ್ನು ಭಿತ್ತರಿಸುವುದಕ್ಕಾಗಿ ಬರಪೀಡಿತ ನಾಡಿಗೆ ವರದಾನವಾದ 'ದಕ್ಷಿಣದ ಗಂಗೆ-ಕೃಷ್ಣೆ' ಎಂಬ ಅಪೂರ್ವ ಅನುಭವಕಥನ ಕೃತಿಯನ್ನು 2010ರಲ್ಲಿ ಪ್ರಕಟಿಸಿ ಕೃತಾರ್ಥರಾಗಿದ್ದಾರೆ. ಅಲ್ಲದೆ ಈ ಕೃತಿಯಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೆಂದರೆ, ಶ್ರೀ ಭಾಸ್ಕರರಾವ ಅವರು ಈ ಕೃತಿಯನ್ನು ಆ ನೀರಾವರಿ ಯೋಜನೆಗಾಗಿ ಭೂಮಿ-ಸೀಮೆಗಳನ್ನು ತ್ಯಾಗಮಾಡಿ, ಊರು-ವಸತಿಗಳನ್ನು ತೊರೆದು ಯೋಜನೆಯ ಜಾರಿಗಾಗಿ ತಮ್ಮ ಪರಂಪರಾಗತ ಬದುಕನ್ನೇ ತ್ಯಾಗಮಾಡಿದ ಸಂತ್ರಸ್ತ ಭೂಒಡೆಯರಿಗೆ ಅರ್ಪಿಸಿರುವುದು ತುಂಬಾ ಮಹತ್ವದ ವಿಷಯವಾಗಿ ತೋರುತ್ತದೆ. ಅಲ್ಲದೇ, ಈ ಕೃತಿಯು ಶ್ರೀ ಭಾಸ್ಕರರಾವ ಮುಡಬೂಳ ಅವರ ರೈತ ಹೋರಾಟದ ಬದುಕಿನ ನಿರಂತರ ಪಯಣವನ್ನೂ ಹಾಗೂ ಅವರು ಈ ಹೋರಾಟದ ಪ್ರತಿ ಹಂತದಲ್ಲಿಯೂ ಪಟ್ಟ ಪರಿಶ್ರಮವನ್ನು ಸುದೀರ್ಘವಾಗಿ ನಿರೂಪಿಸುತ್ತದೆ.




ಭೀಮರಾಯನಗುಡಿ ಹೆದ್ದಾರಿ ಬಂದ್-ಜನವರಿ 2005ರಲ್ಲಿ ಕೆನಾಲ್ ಕೆಳಭಾಗದ ರೈತರ ನೀರಿನ ಹಕ್ಕಿಗಾಗಿ ಭೀಮರಾಮನಗುಡಿ ಸರ್ಕಲ್‌ನಲ್ಲಿ "ರಸ್ತಾರೋಕೋ' ಕಾರ್ಯಕ್ರಮದಲ್ಲಿ ರೈತ ಮುಖಂಡರಾದ ಬೆಂಗಳೂರಿನ ವಿ.ಶಿವಣ್ಣ, ಚಿತ್ರದುರ್ಗದ ಕೊಂಚೆ ಶಿವರುದ್ರಪ್ಪ, ಆನಂದರೆಡ್ಡಿ ಹದನೂರ, ಭಾಸ್ಕರ್‌ರಾವ್ ಮುಡಬುಳ ಇನ್ನಿತರ ರೈತ ಮುಖಂಡರು.



ಶಹಾಪುರ : ಡಿಸಂಬರ್ 8, 1999ರಂದು ಕಿಸಾನ್ ಸಂಘದ ನೇತೃತ್ವದಲ್ಲಿ ಸರ್ವಪಕ್ಷಗಳ ಸಭೆ ಸೇರಿ ಶಹಾಪುರ ಬಂದ್ ಆಚರಿಸಿ ಆಲಮಟ್ಟಿ ಅಣೆಕಟ್ಟಿನ ಎತ್ತರ ವಿವಾದದ ಬಗ್ಗೆ ಪ್ರಧಾನ ಮಂತ್ರಿಗಳಿಗೆ ತಹಸಿಲದಾರ ಮೂಲಕ ರಾಜ್ಯ ಹೆದ್ದಾರಿ ಮೇಲೆ ಮನವಿ ಸಲ್ಲಿಸುತ್ತಿರುವ ರೈತ ಮುಖಂಡ ಯಲ್ಲಯ್ಯ ನಾಯಕ, ಆರ್.ಚೆನ್ನಬಸ್ಸು, ಹನುಮೇಶಕುಲಕರ್ಣಿ, ತಹಸಿಲದಾರ ಶಹಾಪುರ–ಭಾಸ್ಕರ್‌ರಾವ್ ಮುಡಬುಳ ಇನ್ನಿತರ ಮುಖಂಡರು.

ಶ್ರೀ ಭಾಸ್ಕರರಾವ ಮುಡಬೂಳ ಅವರು ಮೊದಲಿನಿಂದಲೂ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸಿಕೊಂಡು ಬಂದಿರುವ ಅಪ್ಪಟ ದೇಶಪ್ರೇಮಿಯಾಗಿದ್ದಾರೆ. ಅವಕಾಶ ಸಿಕ್ಕಾಗಲೆಲ್ಲ ವೃತ್ತಿಯಲ್ಲಿ ಬಿಡುವು ಮಾಡಿಕೊಂಡು ರಾಷ್ಟ್ರೀಯ ಜಾಗೃತಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡು ಬಂದಿದ್ದಾರೆ. ಇವರು 1970 ರಿಂದ 2005ರವೆಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಕ್ರೀಯ ಕಾರ್ಯಕರ್ತರಾಗಿದ್ದರು. 1970ರ ದಶಕದಲ್ಲಿ ನಾಗಪೂರದಲ್ಲಿ ಜರುಗಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಮಾವೇಶದಲ್ಲಿ ಭಾಗವಹಿಸಿದ್ದರು. 1979ರಲ್ಲಿ ಅಖಿಲ ಭಾರತ ಕಿಸಾನ್ ಸಂಘವು ರಾಜಸ್ಥಾನದ 'ಕೂಟಾ' ಎಂಬಲ್ಲಿ ಸ್ಥಾಪನೆಗೊಂಡು, ಕರ್ನಾಟಕದಲ್ಲಿ ಅದರ ಶಾಖೆ ಆರಂಭವಾಗುತ್ತದೆ. ಈ ರಾಜಕೀಯೇತರ ಸಂಘಟನೆಯಲ್ಲಿ ಅತ್ಯಂತ ಉತ್ಸಾಹದಿಂದ ಭಾಗಹಿಸಿ, ಸಂಘಟನೆಯ ಗೊತ್ತು ಗುರಿಗಳನ್ನು ಶ್ರದ್ಧೆಯಿಂದ ಚರ್ಚಿಸುವ ಶ್ರೀ ಭಾಸ್ಕರರಾವ ಅವರ ಕ್ರಿಯಾಶೀಲತೆಗೆ ಅದರ ಸಂಘಟನೆಯ ನಾಯಕರು ಪ್ರಭಾವಿತರಾಗುತ್ತಾರೆ. ಅಲ್ಲದೆ, ಶ್ರೀ ಭಾಸ್ಕರರಾವ ಅವರನ್ನು ಅಖಿಲ ಭಾರತ ಕಿಸಾನ್ ಸಂಘಟನೆಯಲ್ಲಿ ಗುಲಬರ್ಗಾ ಜಿಲ್ಲೆಯ ಕಾರ್ಯದರ್ಶಿಯನ್ನಾಗಿ ನೇಮಿಸುತ್ತಾರೆ. ಕಾಲಕ್ರಮೇಣ ಅಖಿಲ ಭಾರತ ಕಿಸಾನ್ ಸಂಘವು ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುತ್ತದೆ.


ರೈತಪರ ಕಾಳಜಿಯುಳ್ಳ ಶ್ರೀಯುತ ಭಾಸ್ಕರರಾವ ಮುಡಬೂಳ ಅವರು 2005ರಲ್ಲಿ ರಾಷ್ಟ್ರೀಯ ಕಿಸಾನ್ ಸಂಘವನ್ನು ಸ್ಥಾಪಿಸಿ ಅದರ ಸಂಸ್ಥಾಪಕ ಅಧ್ಯಕ್ಷರಾಗಿ ಇಂದಿಗೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ತಮ್ಮ ಮನೆಗೆ 'ಕೃಷಿ ನಿವಾಸ'ವೆಂದೇ ಹೆಸರಿಟ್ಟಿದ್ದಾರೆ. ಇದರಿಂದ ಅವರಿಗಿರುವ ರೈತ ಮತ್ತು ರೈತಾಪಿ ವೃತ್ತಿಯ ಪ್ರೇಮ ವ್ಯಕ್ತವಾಗುತ್ತದೆ. ಈ ಸಂಘಟನೆಯ ಅಡಿಯಲ್ಲಿ ಹಲವಾರು ರೈತ ಸಮಾವೇಶಗಳನ್ನು ಹಮ್ಮಿಕೊಂಡಿದ್ದಾರೆ. ರೈತರ ಹಿತಾಸಕ್ತಿಗೆ ಧಕ್ಕೆ ಉಂಟಾದಾಗಲೆಲ್ಲ ಇವರು ರೈತ ಚಳುವಳಿಗಳನ್ನು ನಡೆಸುವ ಮೂಲಕ ರೈತಪರ ಕಾಳಜಿಯನ್ನು ತೋರುತ್ತಾ ಬಂದಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳಲ್ಲಿ ವಿಳಂಬವಾದಾಗ, ಲೋಪ–ದೋಷ ಕಂಡುಬಂದಾಗ ಈ ಕಿಸಾನ್ ಸಂಘಟನೆಯ ಮೂಲಕ ಸರಕಾರದ ಗಮನ ಸೆಳೆಯುವ ಮತ್ತು ಅಧಿಕಾರಿಗಳನ್ನು ಎಚ್ಚರಿಸುವ ಮೌಲಿಕವಾದ ಹೋರಾಟಗಳನ್ನು, ರೈತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಹೀಗಾಗಿ ಶ್ರೀ ಭಾಸ್ಕರರಾವ ಮುಡಬೂಳ ಅವರು 'ಕಲ್ಯಾಣ ಕರ್ನಾಟಕದ ರೈತ ಸಂಘಟನೆಯ ಬೆನ್ನೆಲುಬು' ಎಂಬ ಭಾವ ಸಾರ್ವಜನಿಕರ ಅರಿವಿನಲ್ಲಿರುವುದು ವಾಸ್ತವವೆನಿಸುತ್ತದೆ.




ಭೀಮರಾಯನಗುಡಿ : ನವಂಬರ್ 1993ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಯಲ್ಲಿ ರಾಜಕೀಯ ಹಸ್ತಕ್ಷೇಪದ ವಿರೋಧದಲ್ಲಿ ಕಿಸಾನ್ ಸಂಘದ ನೇತೃತ್ವದಲ್ಲಿ ರೈತರ ಸಭೆ. ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವ ರೈತ ಮುಖಂಡ ಭಾಸ್ಕರ್‌ರಾವ್ ಹಾಗೂ ರೈತ ಮುಖಂಡರಾದ ಹೈದ್ರಾಬಾದಿನ ದಿ.ವಿದ್ಯಾಸಾಗರಜಿನೂ ಸಿಂಧೂರಿನ ಮುದ್ದೇಗೌಡರು ಬೆಂಗಳೂರಿನ ವಿ.ಶಿವಣ್ಣ ಹಾಗೂ ಸಿದ್ದಾನ್ನಗೌಡಗಡಿಗುಡಿಹಾಳರು.

ಶ್ರೀಯುತ ಭಾಸ್ಕರರಾವ ಮುಡಬೂಳ ಅವರು ಶಿಕ್ಷಣ ಪ್ರೇಮಿಗಳೂ ಹೌದು, ಕೃಷ್ಣ ಮೇಲ್ದಂಡೆ ಯೋಜನೆಯ ಕೇಂದ್ರ ಕಛೇರಿ ಭೀಮರಾಯನಗುಡಿ (ಇಂದಿನ ಯಾದಗೀರ ಜಿಲ್ಲೆ, ಶಹಾಪುರ ತಾಲ್ಲೂಕು)ಯಲ್ಲಿ ಸ್ಥಾಪನೆಯಾದ ಮೇಲೆ ಅಲ್ಲಿ ಕೆಲಸ ಮಾಡುವ ಅಧಿಕಾರಿಗಳು, ನೌಕರರಿಗಾಗಿ ಸಾವಿರಾರು ವಸತಿ ಸಮುಚ್ಚಯಗಳು ಅಲ್ಲಿ ನಿರ್ಮಾಣವಾದವು. ಅವರೆಲ್ಲ ಅಲ್ಲಿಯೇ ಕುಟುಂಬ ಸಮೇತರಾಗಿ ನೆಲೆಸಿದರು. ಆಗ ಅವರ ಮಕ್ಕಳಿಗೆ ಉತ್ತಮ ಆಂಗ್ಲ ಮಾಧ್ಯಮ ಶಿಕ್ಷಣದ ವ್ಯವಸ್ಥೆಯ ಕೊರತೆ ಎದ್ದು ಕಾಣುತ್ತಿತ್ತು. ಅವರ ಇಂಗಿತ ಮತ್ತು ಒತ್ತಾಸೆಯ ಮೇರೆಗೆ ಶ್ರೀಯುತ ಭಾಸ್ಕರರಾವ ಅವರು 1985ರಲ್ಲಿ ಭೀಮರಾಯನಗುಡಿಯಲ್ಲಿ 'ಕೃಷ್ಣಾ ಕಾನ್ವೆಂಟ್ ಸ್ಕೂಲ್' ಎಂಬ ಹೆಸರಿನಲ್ಲಿ ಕೃಷ್ಣಾ ಯೋಜನೆಯ ಸವಿನೆನಪು ಸೂಸುವ ಆಂಗ್ಲ ಮಾಧ್ಯಮ ಶಾಲೆಯನ್ನು ಪ್ರಾರಂಭಿಸುತ್ತಾರೆ. ಈ ಶಿಕ್ಷಣ ಸಂಸ್ಥೆ ಅಂದಿನಿಂದಲೂ ಉತ್ತಮವಾದ ಶಿಕ್ಷಣ ಸಂಸ್ಥೆಯೆಂಬ ಕೀರ್ತಿಗೆ ಪಾತ್ರವಾಗಿದೆ. ಇಂದಿಗೂ ಕೂಡ ಅಲ್ಲಿನ ಈ ಕಾನ್ವೆಂಟ್ ಶಾಲೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಾ ಜನಪ್ರೀಯವಾಗಿದೆ. ಈ ಸಂಸ್ಥೆ ಶ್ರೀಯುತ ಭಾಸ್ಕರರಾವ ಅವರ ಶಿಕ್ಷಣ ಪ್ರೇಮಕ್ಕೆ ಹಿಡಿದ ಕೈಗನ್ನಡಿ ಎನ್ನಬಹುದು.

ಶ್ರೀಯುತ ಭಾಸ್ಕರರಾವ ಅವರು ಸಂಸ್ಕೃತಿ ಚಿಂತಕರು ಮತ್ತು ಬರಹಗಾರರಾಗಿಯೂ ಕೂಡ ಖ್ಯಾತಿ ಗಳಿಸಿದ್ದಾರೆ. ಇವರು ಭಾರತದ ಇತಿಹಾಸ ಮತ್ತು ಸಂಸ್ಕೃತಿಯ ಬಗೆಗೆ ಅಪಾರವಾದ ಆಸಕ್ತಿ ಮತ್ತು ಅರಿವನ್ನು ಹೊಂದಿದ್ದಾರೆ. ಅದರಲ್ಲಿಯೂ ಶ್ರೀ ಭಾಸ್ಕರರಾವ ಅವರು ಸುರಪುರ ಸಂಸ್ಥಾನದ ಇತಿಹಾಸದ ಬಗೆಗೆ ಅಪೂರ್ವವಾದ ಜ್ಞಾನವನ್ನು ಸಂಪಾದಿಸಿದ್ದಾರೆ. ಅಲ್ಲದೆ, ಇವರು 2001ರಲ್ಲಿ 'ಮರೆತುಹೋದ ಸುರಪುರ ಇತಿಹಾಸ'ವೆಂಬ ಮೌಲಿಕವಾದ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕೃತಿ 2015ರಲ್ಲಿ ಮರುಮುದ್ರಣವಾಗುವಾಗ ಸುರಪುರ ಸಂಸ್ಥಾನಕ್ಕೆ ಸಂಬಂಧಿಸಿದ ಮತ್ತಷ್ಟು ಮೌಲಿಕ ವಿಷಯಗಳನ್ನು ಸೇರಿಸಿ ಪ್ರಕಟಿಸಿದ್ದಾರೆ. ಈ ಹಿಂದೆ ಶ್ರೀ ಕಪಟರಾಳ ಕೃಷ್ಣರಾವ ಅವರು ಪ್ರಕಟಿಸಿದ್ದ 'ಸುರಪುರ ಸಂಸ್ಥಾನದ ಇತಿಹಾಸ'ದಲ್ಲಿ ಇಲ್ಲದ ಹಲವು ಹೊಸ ಸಂಗತಿಗಳು ಈ ಕೃತಿಯಲ್ಲಿ ಒಡಮೂಡಿವೆ. ಹೀಗಾಗಿ ಇದೊಂದು ಉತ್ತಮ ಆಕರ ಗ್ರಂಥವಾಗಿದೆ. ಇವರ ಕೃತಿಯಲ್ಲಿ ಕಂಡುಬರುವ ಹೊಸ ವಿಷಯಗಳಲ್ಲಿ 'ಇಂಗ್ಲೆಂಡ್ ರಾಣಿಯ ಕಿರೀಟದಲ್ಲಿ ಇಂದಿಗೂ ವಿರಾಜಿಸುತ್ತಿರುವ ಅತ್ಯಮೂಲ್ಯ ಕೊಹಿನೂರು ವಜ್ರವು ಮೂಲತಃ ಸುರಪುರ ಸಂಸ್ಥಾನಕ್ಕೆ ಸೇರಿದ್ದು; ಇದು ಇಂದಿನ ಯಾದಗೀರ ಜಿಲ್ಲೆ ಶಹಾಪುರ ತಾಲೂಕಿನ ಕೊಳ್ಳೂರು (ಕೃಷ್ಣಾ ನದಿ ಪಕ್ಕದ ಹಳ್ಳಿ) ಗ್ರಾಮದಲ್ಲಿ ಲಭಿಸಿದೆ'–ಎಂಬ ಸಂಗತಿ ಮಹತ್ವದ್ದಾಗಿದೆ. ಇಂತಹ ಹಲವು ಅಪೂರ್ವ ಮಾಹಿತಿಯನ್ನು ಈ ಕೃತಿ ನೀಡುತ್ತದೆ. ಇಂಥ ಹಲವಾರು ವಿಶಿಷ್ಟವಾದ ಮಾಹಿತಿಗಳ ಕಣಜವಾದ 'ಮರೆತುಹೋದ ಸುರಪುರ ಇತಿಹಾಸ' ಕೃತಿಯು ಮೌಲಿಕ ಗ್ರಂಥವಾಗಿದೆ.



ಶಹಾಪುರ : ಜೂನ್ 2005ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಅಭ್ಯಾಸಿಸಲು ಬಂದ ಸ್ವಿಜರ್‌ಲ್ಯಾಂಡಿನ ಕೃಷಿ ವಿಜ್ಞಾನಿ ಡಾ. ಮೆಥಾಯಿ ಎಕಿಲಿಯೋ ಜತೆ ಚರ್ಚೆಯಲ್ಲಿ ಲೇಖಕ.

ಶ್ರೀಯುತರ ಇತಿಹಾಸ ಪ್ರಜ್ಞೆ ತುಂಬಾ ಕ್ರಿಯಾತ್ಮಕವಾಗಿದೆ. ಇವರು 2008ರಲ್ಲಿ ಭೀಮರಾಯನ ಗುಡಿಯಲ್ಲಿ ಇತಿಹಾಸ ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆಯ ಅಡಿಯಲ್ಲಿ ಸಗರನಾಡಿನ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಮತ್ತು ಸಂಶೋಧನೆಗಳಿಗಾಗಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದಾರೆ. ಇದರ ಅಡಿಯಲ್ಲಿ ಪ್ರತಿವರ್ಷ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಕೂಡ ನಡೆಸುತ್ತಾ ಬಂದಿದ್ದಾರೆ. ಇವರಿಗೆ ಪ್ರಾಚೀನ ದೇವಸ್ಥಾನಗಳು, ವಾಸ್ತುಶಿಲ್ಪ, ಶಾಸನ, ಐತಿಹಾಸಿಕ ಸ್ಥಳಗಳ ಬಗೆಗೆ ಅರಿತುಕೊಳ್ಳುವ ಅಪಾರವಾದ ಆಸಕ್ತಿ ಇದೆ; ಸಗರನಾಡಿನ ಭಾಗದ ಸಾಂಸ್ಕೃತಿಕ ಚರಿತ್ರೆಯ ಬಗೆಗೆ ಲಭ್ಯವಾದ ಮಾಹಿತಿಯನ್ನು ಅಧ್ಯಯನದಿಂದ ಅರಿತುಕೊಂಡಿದ್ದಾರೆ. ಈ ದಿಶೆಯಲ್ಲಿ ಇವರ ಇತಿಹಾಸ ಪ್ರಜ್ಞೆ ಮತ್ತು ಪರಂಪರೆಯ ಕಾಳಜಿ ವ್ಯಕ್ತವಾಗುತ್ತದೆ.

ಒಟ್ಟಿನಲ್ಲಿ ಶ್ರೀ ಭಾಸ್ಕರರಾವ ಮುಡಬೂಳ ಅವರು ವೃತ್ತಿಯಿಂದ ನ್ಯಾಯವಾದಿಯಾದರೂ, ಪ್ರವೃತ್ತಿಯಿಂದ ರೈತ ಸಂಘಟನೆಯ ನೇತಾರರಾಗಿ, ಇತಿಹಾಸ–ಸಂಸ್ಕೃತಿ ಮತ್ತು ಸಾಹಿತ್ಯಗಳ ಆರಾಧಕರೂ, ಚಿಂತಕರೂ ಆಗಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಎಲ್ಲರೊಂದಿಗೂ ಸರಳವಾಗಿ ಬೆರೆಯುವ ಇವರು ಯಾರನ್ನೂ ಎದುರಿಸದ ಮತ್ತು ಯಾರಿಗೂ ಹೆದರದ ಧೀರತೆಯ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಬಂದಿದ್ದಾರೆ. ಇವರು ಅನೇಕ ವರ್ಷಗಳವರೆಗೆ ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಪತ್ರಿಕೆಗಳಲ್ಲಿ ಸ್ಥಳೀಯ ವರದಿಗಾರರಾಗಿ ಕೂಡ ಕಾರ್ಯನಿರ್ವಹಿಸಿದ್ದಾರೆ. ಇವರ ಬರಣಿಗೆಯ ಕೌಶಲ್ಯದ ಪ್ರತೀಕವಾಗಿ, ಅಧ್ಯಯನ ಮತ್ತು ಚಿಂತನೆಯ ಆಸಕ್ತಿಯಿಂದಾಗಿ 'ಮರೆತುಹೋದ ಸುರಪುರ ಇತಿಹಾಸ' ಮತ್ತು 'ದಕ್ಷಿಣದ ಗಂಗೆ–ಕೃಷ್ಣೆ' ಎಂಬ ಎರಡು ಮೌಲಿಕ ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ಇವರು ನೀಡಿದ ಚಿರಕಾಣಿಕೆಗಳಾಗಿವೆ.

**ಕೊನೆ ಟಿಪ್ಪಣಿಗಳು**

1. ಶ್ರೀ ಭಾಸ್ಕರರಾವ ಮುಡಬೂಳ–ದಕ್ಷಿಣದ ಗಂಗೆ–ಕೃಷ್ಣೆ, ಪು.ನ, 2010
2. ಅದೇ, ಪು, 6, 2010.
3. ಅದೇ, ಪು, 123, 2010.
4. ಅದೇ, ಪು, 124, 2010.
5. ಅದೇ, ಪು, 125, 2010.
6. ಶ್ರೀ ಭಾಸ್ಕರರಾವ ಮುಡಬೂಳ–ಮರೆತುಹೋದ ಸುರಪುರ ಇತಿಹಾಸ, ಪು.139–140, 2015.

**ಪರಾಮರ್ಶನ ಗ್ರಂಥಗಳು ಮತ್ತು ಮಾಹಿತಿ**

1. ಶ್ರೀ ಭಾಸ್ಕರರಾವ ಮುಡಬೂಳ–ದಕ್ಷಿಣದ ಗಂಗೆ–ಕೃಷ್ಣೆ, 2010.
2. ಶ್ರೀ ಭಾಸ್ಕರರಾವ ಮುಡಬೂಳ–ಮರೆತುಹೋದ ಸುರಪುರ ಇತಿಹಾಸ, 2015.
3. ಶ್ರೀ ಭಾಸ್ಕರರಾವ ಮುಡಬೂಳ ಸಂದರ್ಶನದ ಟಿಪ್ಪಣಿ.